ಮತ್ತು ಓದಲು ಕನ್ನಡ ಕಲಿಸಲಾಗುತ್ತಿದೆ. ಕನ್ನಡ ಬಾರದ ಜನರಿರುವ ಪ್ರದೇಶಗಳಲ್ಲಿ ಮತ್ತು ಅಲ್ಲಿನ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದಿಂದ ಈ ಕನ್ನಡ ತರಬೇತಿ ಶಿಬಿರವನ್ನು ರಾಜ್ಯಾದಂತ ನಡೆಸಲಾಗುತ್ತಿದೆ. ವರ್ಷಕ್ಕೆ ಅನೇಕ ಕೇಂದ್ರಗಳಲ್ಲಿ ಈ ತರಗತಿಗಳು ನಡೆಯುತ್ತಾ ಬಂದಿದೆ ಇದಲ್ಲದೆ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಕಾರದಿಂದ ಸರ್ಕಾರದ ಎಲ್ಲಾ ಮಟ್ಟದ ಕನ್ನಡ ಬಾರದ ಅಧಿಕಾರಿಗಳು ಹಾಗೂ ನೌಕರರು ಕೇಂದ್ರ ಸರ್ಕಾರದ ಕಛೇರಿಗಳ ಕಾರ್ಖಾನೆ ಹಾಗೂ ಬ್ಯಾಂಕುಗಳ ಸಿಬ್ಬಂದಿವರ್ಗ, ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳ, ಮಂಡಳಿಗಳ, ಕಾರ್ಪೊರೇಷನ್‌ಗಳ ಸಿಬ್ಬಂದಿಗೆ ಅಂಚೆ ಮೂಲಕ ಕನ್ನಡ ಕಲಿಸಲಾಗುತ್ತಿದೆ. ಇದು ಒಂದು ವರ್ಷದ ಶಿಬಿರ. ಮೇಲೆ ತಿಳಿಸಿದಂತೆ ಕನ್ನಡ ಕಲಿಕೆಗೆ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮೂಲಕ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಎಂಟನೇ ಪಟ್ಟಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ರೇವಿನ್ಯೂ ನಿವೇಶನದಾರರ ಸಮಸ್ಯೆಗಳ ಬಗ್ಗೆ

೪೭೮. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಸುತ್ತ ಮುತ್ತಲೂ ಸಾವಿರಾರು ಕಾರ್ಮಿಕರು, ಮಧ್ಯಮ ವರ್ಗದವರು ಸರ್ಕಾರಿ ನೌಕರರು ನಿವೇಶನಗಳನ್ನು ಕೊಂಡಿರುವುದು ಹಾಗೂ ಕೆಲವರು ಮನೆ ಕಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಅನೇಕ ಮನೆಗಳನ್ನು ಬಿ.ಡಿ.ಎ.ಅಧಿಕಾರಿಗಳು ವಿಕಾವಿಕಿ ಕೆಡವಿರುವುದರಿಂದ, ಒಬ್ಬೊಬ್ಬರಿಗೂ ಸಾವಿರಾರು ರೂಪಾಯಿಗಳು ನಷ್ಟವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ರೇವಿನ್ಯೂ ನಿವೇಶನದಾರರ ಸಮಸ್ಯೆಯನ್ನು ಮಾನವೀಯತೆ ದೃಷ್ಟಿಯಿಂದ ಬಗೆಹರಿಸುವುದಾಗಿ ಸರ್ಕಾರದವರು ಭರವಸೆ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಗಮನದಲ್ಲಿದೆಯೇ ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ರೇವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿದೆ.

ಸುಬ್ರಮಣ್ಯ ನಗರದಲ್ಲಿ ಆಟದ ಮೈದಾನ ಮತ್ತು ಸರ್ಕಾರಿ ಶಾಲೆ ಸ್ಥಾಪನೆ ಬಗ್ಗೆ

೪೭೯. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜಾಜಿನಗರದ ವಿಧಾನಸಭಾ ಕ್ಷೇತ್ರದಲ್ಲಿರುವ ಸುಬ್ರಮಣ್ಯ ನಗರದಲ್ಲಿ ಕೆರೆ ಅಂಗಳದ ಎರಡು ಭಾಗಗಳಲ್ಲಿ ಒಂದೆಡೆ ಆಟದ ಮೈದಾನವನ್ನು, ಇನ್ನೊಂದೆಡೆ ಸರ್ಕಾರಿ ಶಾಲೆಯನ್ನು ಕಟ್ಟಿಸಿಕೊಡ

ಬೇಕೆಂದು ಅಲ್ಲಿನ ಸಾರ್ವಜನಿಕರು ಮತ್ತು ಶಾಸಕರು, ಆಗಿಂದಾಗ್ಗೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಪ್ರದೇಶವನ್ನು ನಗರಾಭಿವೃದ್ಧಿ ಮಂತ್ರಿಗಳು ಕಾರ್ಪೊರೇಷನ್ ಅಧಿಕಾರಿಗಳೂ ತಪಾಸಣೆ ಮಾಡಿ ಆಟದ ಮೈದಾನ ಮಂತ್ರಿತರ ಸೌಲಭ್ಯಗಳನ್ನೊದಗಿಸಂಥ ಭರವಸೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಕಳೆದ ನಾಲ್ಕು ವರ್ಷಗಳಿಂದ ಈ ಭರವಸೆಗಳನ್ನು ಈಡೇರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಈ) ಹಾಗಿದ್ದಲ್ಲಿ ಈ ಪ್ರದೇಶದಲ್ಲಿ ಆಟದ ಮೈದಾನ ಮತ್ತು ಶಾಲೆಗಳನ್ನು ನಿರ್ಮಿಸಲು ಸರ್ಕಾರ ಕಾರ್ಯಕ್ರಮ ಕೈಗೊಳ್ಳತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಭೇಟಿ ಕೊಟ್ಟಿರುತ್ತದೆ. ಸೌಲಭ್ಯಗಳನ್ನು ಒದಗಿಸಂಥ ಬಗ್ಗೆ ಆಶ್ವಾಸನೆ ಕೊಟ್ಟಿಲ್ಲ.

ಇ) ಈ ಪ್ರದೇಶದ ಬಗ್ಗೆ ಶ್ರೀ ಬಿ.ಎಸ್. ಜಯಸೂರ್ಯ ಮಂತರ್ತು ಜೆ. ಶ್ರೀನಿವಾಸ್ ರೆಡ್ಡಿ ಎಂಬುವರು ಆಸ್ತಿ ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಿ ತಡೆಯಾಜ್ಞೆಯನ್ನು ತಂದಿರುತ್ತಾರೆ. ತಡೆಯಾಜ್ಞೆಯನ್ನು ತೆರವು ಮಾಡಲಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದ್ದು. ದಿನಾಂಕ ೨೦-೨-೮೬ರಂದು ತಡೆಯಾಜ್ಞೆಯನ್ನು ನ್ಯಾಯಾಲಯವು ವಿಮರ್ಶಿಸಿ ಮಹಾನಗರಪಾಲಿಕೆಯವರು ಈ ಆಸ್ತಿಯಲ್ಲಿ ಹಾದುಹೋಗುವ ರಸ್ತೆಯನ್ನು ರಿಪೇರಿ ಮಾಡಲು ಮಾತ್ರ ಅವಕಾಶವನ್ನು ಕಲ್ಪಿಸಿ ಕೊಟ್ಟಿರುತ್ತದೆ. ತಡೆಯಾಜ್ಞೆ ಮುಂದುವರಿಯುತ್ತದೆ. ದಾವೆ ತೀರ್ಮಾನವಾದ ನಂತರ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲೆ ತಿಳಿಸಿರುವ ಕಾರಣದಿಂದ ಇದು ಉದ್ಭವಿಸುವುದಿಲ್ಲ.

ಪ್ರತಿಯೊಂದು ತಾಲ್ಲೂಕಿಗೆ ಕ್ರೀಡಾಂಗಣ ನಿರ್ಮಾಣ

೧೨೫೫ ಶ್ರೀ ಜ್ಞಾನದೇವ ಎನ್ ದೊಡ್ಡಮೇಟಿ(ರೋಣ).—ಮಾನ್ಯ ಯುವಜನ ಸೇವಾ ಮಂತು ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕ್ರೀಡಾಂಗಣ ನಿರ್ಮಾಣಕ್ಕೆ ಸರ್ಕಾರದವರು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ.

ಆ) ಹಾಗಿದ್ದಲ್ಲಿ ಯಾವ ಯಾವ ತಾಲ್ಲೂಕುಗಳನ್ನು ತೆಗೆದುಕೊಳ್ಳಲಾಗಿದೆ.

ಇ) ಕ್ರೀಡಾಂಗಣ ನಿರ್ಮಾಣಕ್ಕೆ ಅನುಸರಿಸಬೇಕಾದ ನಿಯಮಗಳಿವೆಯೆ ? ಹಾಗಿದ್ದಲ್ಲಿ ಅವು ಯಾವುವು ?

ಶ್ರೀ ಬಿ.ಎಲ್. ಶಂಕರ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯಮಂತ್ರಿಗಳು).—

ಅ) ಹೌದು.

ಆ) ಸದ್ಯಕ್ಕೆ ದಾವಣಗೆರೆಯಲ್ಲಿ ಮಾತ್ರ ಕ್ರೀಡಾಂಗಣ ಕಾರ್ಯವನ್ನು ನಗರ ಸಭೆಯವರು ಪ್ರಾರಂಭಿಸಿದ್ದಾರೆ.

ಇ) ಹೌದು (ನಿಯಮಾವಳಿಯನ್ನು ಲಗತ್ತಿಸಲಾಗಿದೆ.)